**ದಿನಾಂಕ 02.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ: ಶ್ರೀ.ಯು.ಎಸ್. ವಕೀಲರಿಂದಃ–**

ಪುರಸಭೆ ಜಾಗವನ್ನು ಯಾರಿಗಾದರು ಒಬ್ಬರಿಗೆ ಕೊಡಬೇಕು ಎಂದರೆ ಅದನ್ನು ಹರಾಜು ಹಾಕಬೇಕು ಎಂದರೆ ಸರಿ. ಹರಾಜಿಗೆ ಯಾರನ್ನು ಕರೆದಿರುವುದಿಲ್ಲ, ಹಾಗಾಗಿ ನಾನು ಭಾಗವಹಿಸಿರುವುದಿಲ್ಲ. ಒಂದು ಸ್ಥಿರ ವಸ್ತು ಒಬ್ಬರಿಂದ ಒಬ್ಬರಿಗೆ ವರ್ಗಾವಣೆಯಾಗಬೇಕಾದರೆ ಅದು ಒಬ್ಬರ ಹೆಸರಿಗೆ ನೊಂದಣಿಯಾಗಿರಬೇಕು ಎಂದರೆ ಸರಿ. ಮುರುಡಪ್ಪನವರು ಕುರುಬರ ಜಾತಿಗೆ ಸೇರಿದವರು ಆಗಿರುತ್ತಾರೆ ಎಂದರೆ ಸರಿ. ವಾದಿಗಳು ಕುರುಬರ ಜಾತಿಗೆ ಸೇರಿದವರು ಅಲ್ಲ ಎಂದರೆ ಸರಿ. ಅಸೆಸ್ಮೆಂಟ್ ಸಂ.3518 ನನಗೆ ಸೇರಿದ್ದಾಗಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಅಸೆಸ್ಮೆಂಟ್ ಸಂ.3518/4178 ಸಹ ನನಗೆ ಸೇರಿದ್ದಾಗಿರುವುದಿಲ್ಲ ಎಂದರೆ ಸರಿ. ನಿಪಿ.16 ರಲ್ಲಿರುವ ಅಸೆಸ್ಮೆಂಟ್ ಸಂ.3518 1974–75 ನೇ ಸಾಲಿಗೆ ಸೇರಿದ್ದು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ತಿಮ್ಮಪ್ಪ ನನ್ನ ಮಾವನಾಗಿರುತ್ತಾರೆ ಎಂದರೆ ಸರಿ. ಸದರಿ ತಿಮ್ಮಪ್ಪನವರು ಇಂದು ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ಅಸಲು ದಾವಾ ಸಂ.374/2013 ರಲ್ಲಿ ಸದರಿ ತಿಮ್ಮಪ್ಪನವರು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿ ಸಾಕ್ಷಿ ನುಡಿ ಅದನ್ನು ಒಪ್ಪಿದ್ದರಿಂದ ಪ್ರತಿವಾದಿಯರ ಪರ ವಕೀಲರಿಂದ ತಕರಾರಿಗೆ ಒಳಪಟ್ಟು ಅದನ್ನು ನಿಪಿ.45 ಎಂದು ಗುರುತಿಸಲಾಯಿತು. ನಿಪಿ.45 ರಲ್ಲಿ ಸದರಿ ತಿಮ್ಮಪ್ಪನವರು 15 ವರ್ಷಗಳಿಂದ ವಾಸವಿರುತ್ತಾರೆ ಎಂದು ನುಡಿದಿರುತ್ತಾರೆ ಎಂದರೆ ಸರಿ. ಅದೇ ರೀತಿ 1954 ರಿಂದಲೂ ತಿಮ್ಮಪ್ಪನವರು ಸದರಿ ಮನೆಯಲ್ಲಿ ವಾಸವಿರುತ್ತಾರೆಂದು ಸಹ ಸಾಕ್ಷಿ ಹೇಳಿರುತ್ತಾರೆಂದರೆ ಸಾಕ್ಷಿಯು ನಾವು ನಿವೇಶನದ ಪಕ್ಕದ ಮನೆಯಲ್ಲಿ ವಾಸವಿರುವ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ ಎಂದು ನುಡಿಯುತ್ತಾರೆ.

ನಾವು ನೀಡಿದ ನೋಟೀಸಿಗೆ ನೀವು ಹಾಜರುಪಡಿಸಿರುವ ದಾಖಲೆಗಳು ನೊಂದಣಿಯಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರೀತಿ–ವಿಶ್ವಾಸದಿಂದ ನಾವು ಮರುಡಪ್ಪನವರಿಂದ ಪತ್ರ ಬರೆಸಿಕೊಂಡು ಸರ್ಕಾರಕ್ಕೆ ರೂ.7,322/–ಹಣವನ್ನು ಕಟ್ಟಿ ಮುನಿಸಿಪಾಲಿಟಿ ರೆಸಲ್ಲೂಷನ್ ಪಾಸಾದ ನಂತರ ನಮಗೆ ನಿಪಿ.41 ರಲ್ಲಿ ಕಾಣುವ ಕೆಂಪು

ಹೆಂಚಿನ ಮನೆಗೆ ಪತ್ರ ಮತ್ತು ಕಂದಾಯ ರಶೀದಿಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅದಿಕೃತವಾಗಿರುವುದಕ್ಕೆ ಸಂಬಂಧಿಸಿದಂತೆ ಎ ಖಾತಾವನ್ನು ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಸ್ಮೆಂಟ್ ಸಂ.2211 ಮುರುಡಪ್ಪನವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಇದುವರೆಗು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕ್ರಯ ಪತ್ರವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಪರ ನೀಡಿದ ನೋಟೀಸಿಗೆ ಸಂಬಂಧಿಸಿದಂತೆ ನಾನು ಹಾಜರುಪಡಿಸಿರುವ ಒಪ್ಪಿಗೆ ಪತ್ರದಲ್ಲಿ ಪೂರ್ವವನ್ನು ತಿದ್ದಿ ಉತ್ತರವನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಪತ್ರದಲ್ಲಿ ಮುರುಡಪ್ಪನವರು ನನಗೆ ನೀಡಿದ ಮನೆಗೆ ಸಂಬಂಧಿಸಿದ ಚಕ್ಕುಬಂದಿಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

ಮುರುಡಪ್ಪನವರು ನನಗೆ ಯಾವುದೇ ಮನೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೂ, ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.41ರಲ್ಲಿ ತೋರಿಸುವ ಕೆಂಪು ಹೆಂಚಿನ ಮನೆಯ ಜಾಗ ಬೀರೂರು ಮುನಿಸಿಪಾಲಿಟಿಗೆ ಸೇರಿದ ಜಾಗ ಎಂದರೆ, ಸಾಕ್ಷಿಯು ನಾನು ಮುರುಡಪ್ಪನವರಿಂದ ಖರೀದಿಸಿದ ಜಾಗ ಎಂದು ನುಡಿಯುತ್ತಾರೆ. ನಾನು ಮುರುಡಪ್ಪನವರಿಂದ ಖರೀದಿಸಿದ ಜಾಗ ಅಸ್ಮೆಂಟ್ ಸಂ.5211 ಆಗಿರುತ್ತದೆ. ನಿಪಿ.41ರಲ್ಲಿ ತೋರಿಸುವ ಕೆಂಪು ಹೆಂಚಿನ ಮನೆಯ ಜಾಗ ನನಗೆ ಸೇರಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಾಗವು ಮುರುಡಪ್ಪನವರಿಗೂ ಸೇರಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯು ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನದಲ್ಲದ ಜಾಗಕ್ಕೆ ನನ್ನದು ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾದಂ.,ರವರು ಕಡೂರು.